ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

12

ಇಲಾಖೆ / ವಿಷಯ : DEPARTMENT / SUBJECT: ಗೃಹ - ಸಾರಿಗೆ ಮುಷ್ಕರ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE: 11/4/21

## ಕಠಿಣಾಸ್ತ್ರಕ್ಕೆ ಕರಗುತ್ತಿರುವ ನೌಕರರು । 1626ಕ್ಕೂ ಅಧಿಕ ಬಸ್ ರಸ್ತೆಗೆ
## 55 ವರ್ಷ ಮೀರಿದವರಿಗೆ ಕಡ್ಡಾಯ ನಿವೃತ್ತಿ ಎಚ್ಚರಿಕೆ । ಕೋಡಿಹಳ್ಳಿ ಲಾಕ್

# ದಾರಿಗೆ ಬರುವತ್ತ ಸಾರಿಗೆ

**ವಿಕ ಸುದ್ದಿಲೋಕ** ಬೆಂಗಳೂರು

ವೇತನ ಪರಿಷ್ಕರಣೆಗೆ ಪಟ್ಟು ಹಿಡಿದಿರುವ ಮುಷ್ಕರನಿರತ ನೌಕರರ ವಿರುದ್ಧ ಕಠಿಣಾಸ್ತ್ರಗಳನ್ನು ಮುಂದುವರಿಸಿರುವ ಬೆನ್ನಲ್ಲೇ ಕೆಲ ಸಿಬ್ಬಂದಿ ಸ್ವಯಂಪ್ರೇರಿತವಾಗಿ ಬಂದು ಬಸ್‌ಗಳನ್ನು ಓಡಿಸುತ್ತಿದ್ದಾರೆ. ಪರಿಣಾಮ, ಶನಿವಾರ ರಾಜ್ಯಾದ್ಯಂತ 21 ಸಾವಿರ ಸರಕಾರಿ ಬಸ್‌ಗಳ ಪೈಕಿ 1626ಕ್ಕೂ ಅಧಿಕ ಸರಕಾರಿ ಬಸ್‌ಗಳು ರಸ್ತೆಗಿಳಿದವು. ಸಾವಿರಾರು ಖಾಸಗಿ ವಾಹನಗಳೂ ಸೇವೆ ಮುಂದುವರಿಸಿದವು.

ಮುಷ್ಕರದ ಮುಂಚೂಣಿಯಲ್ಲಿದ್ದ ಟ್ರೈನಿ ನೌಕರರ ವಜಾ, ಕಾಯಂ ಸಿಬ್ಬಂದಿಯ ವರ್ಗಾವಣೆಯಂತಹ ಕಠಿಣ ಕ್ರಮಗಳಿಗೆ ಹೆದರಿರುವ ಬಹುತೇಕರು ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ. ಮುಂದಿನ ಒಂದೆರಡು ದಿನಗಳಲ್ಲೇ ಮುಷ್ಕರ ಅಂತ್ಯ ಕಾಣುವ ನಿರೀಕ್ಷೆಯೂ ಇದೆ.

''ಮುಷ್ಕರನಿರತ ಕಾಯಂ ಮತ್ತು ಟ್ರೈನಿ ನೌಕರರ ಪೈಕಿ ಹಲವರು ಸ್ವಯಂಪ್ರೇರಿತವಾಗಿ ಸೇವೆಗೆ ಮರಳಲು ಒಲವು ತೋರಿದ್ದಾರೆ. ಡಿಪೋ ಮ್ಯಾನೇಜರ್‌ಗಳಿಗೆ ಕರೆ ಮಾಡಿ ಡ್ಯೂಟಿ ನೀಡುವಂತೆ ಕೇಳಿಕೊಳ್ಳುತ್ತಿದ್ದು, ಯುಗಾದಿ ಹಬ್ಬದ ವೇಳೆಗೆ ಬಸ್‌ಗಳ ಸಂಚಾರ ಯಥಾಸ್ಥಿತಿಗೆ ಮರಳಲಿದೆ. ಭಾನುವಾರದಿಂದ ಕಾರ್ಯಾಚರಣೆಗೊಳ್ಳುವ ಬಸ್‌ಗಳ ಸಂಖ್ಯೆಯು ಮತ್ತಷ್ಟು ಹೆಚ್ಚಾಗಲಿದೆ,'' ಎಂದು ಕೆಎಸ್ಆರ್‌ಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.



ಬೆಳಗಾವಿಯಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ವಶಕ್ಕೆ ಪಡೆದು ಕರೆದೊಯ್ದ ಪೊಲೀಸರು.

ಬೆಳಗಾವಿಯಲ್ಲಿ ನಿಗದಿಯಾಗಿದ್ದ ಸಾರಿಗೆ ನಿಗಮಗಳ ನೌಕರರ ಸಭೆಯಲ್ಲಿ ಭಾಗವಹಿಸಲು ತೆರಳಿದ್ದ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಹೋಟೆಲ್‌ವೊಂದರಲ್ಲಿ ವಶಕ್ಕೆ ಪಡೆದು, ಜಿಲ್ಲೆಯಿಂದ ಹೊರಗೆ ಕಳುಹಿಸಲಾಗಿದೆ. ಪೊಲೀಸರ ಈ ಕ್ರಮವನ್ನು ಡಿಸಿಎಂ ಲಕ್ಷ್ಮಣ ಸವದಿ ಸಮರ್ಥಿಸಿಕೊಂಡಿದ್ದು, 'ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಖುಷಿಪಡುವ ಪಟ್ಟಭದ್ರರನ್ನು ಬಂಧಿಸುವುದು ಅನಿವಾರ್ಯವಾಗಿತ್ತು' ಎಂದಿದ್ದಾರೆ.

ರಾಜ್ಯದಲ್ಲಿ ಶನಿವಾರ **1500**ಕ್ಕೂ ಅಧಿಕ ಬಸ್‌ಗಳ ಸಂಚಾರ ನಡೆಸಿವೆ. ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಬಸ್ ಸಂಚಾರ ಸಾಮಾನ್ಯ ಸ್ಥಿತಿಗೆ ಬರಲಿದೆ. ನಾವು ನೌಕರರಿಗೆ ಬೆದರಿಕೆ ಹಾಕುತ್ತಿಲ್ಲ. ಕಾನೂನು ಉಲ್ಲಂಘಿಸಿದವರ ವಿರುದ್ಧ ಕ್ರಮ ಜರುಗಿಸುತ್ತಿದ್ದೇವೆ.

**-ಲಕ್ಷ್ಮಣ ಸವದಿ** ಸಾರಿಗೆ ಸಚಿವ

- ಕೆಲಸಕ್ಕೆ ಹಾಜರಾಗುವಂತೆ ನೋಟಿಸ್ ನೀಡಿದ ಬಳಿಕವೂ ಗೈರಾಗಿದ್ದ ಬಿಎಂಟಿಸಿಯು 60 ಮಂದಿ ಟ್ರೈನಿ ಹಾಗೂ 58 ಪ್ರೊಬೆಷನರಿ ಸಿಬ್ಬಂದಿಯನ್ನು ಸೇವೆಯಿಂದ ವಜಾ ಮಾಡಲಾಗಿದೆ. ಈ ಹಿಂದೆ 96 ಮಂದಿಯ ವಜಾ ಆಗಿತ್ತು.
- ಮುಷ್ಕರದಲ್ಲಿ ಪಾಲ್ಗೊಳ್ಳುವಂತೆ ನೌಕರರನ್ನು ಪ್ರಚೋದಿಸಿ, ಕರ್ತವ್ಯಕ್ಕೆ ಹಾಜರಾಗದಂತೆ ಬೆದರಿಕೆ ಹಾಕುವ ಜತೆಗೆ ಬಸ್‌ಗಳ ಕಾರ್ಯಾಚರಣೆಗೆ ಅಡ್ಡಿಪಡಿಸಿ ಪ್ರಯಾಣಿಕರಿಗೆ ತೊಂದರೆ ಉಂಟು ಮಾಡುತ್ತಿದ್ದ 73 ಚಾಲಕರು, ನಿರ್ವಾಹಕರು, 4 ಮಂದಿ ಸಂಚಾರ ಮೇಲ್ವಿಚಾರಕರು ಹಾಗೂ 11 ಮಂದಿ ತಾಂತ್ರಿಕ ಸಿಬ್ಬಂದಿ ಸೇರಿ ಒಟ್ಟು 88 ಮಂದಿಯನ್ನು ಬೇರೆ ವಿಭಾಗಕ್ಕೆ ವರ್ಗಾಯಿಸಲಾಗಿದೆ. ಶುಕ್ರವಾರವೂ 292 ಮಂದಿಯನ್ನು ವರ್ಗ ಮಾಡಲಾಗಿತ್ತು.

55 ವರ್ಷ ಮೀರಿದ ನೌಕರರು ವೈದ್ಯಕೀಯ ಮತ್ತು ದೇಹ ದಾರ್ಢ್ಯತೆ ಪ್ರಮಾಣ ಪತ್ರವನ್ನು ವೈದ್ಯಾಧಿಕಾರಿಗಳಿಂದ ಪಡೆದು ಏ. 12ರ ಸಂಜೆಯೊಳಗೆ ಸಲ್ಲಿಸಬೇಕು. ಇಲ್ಲದಿದ್ದರೆ ಘಟಕ ವ್ಯವಸ್ಥಾಪಕರಿಗೆ ಅಥವಾ ಘಟಕದ ಪ್ರಭಾರ ಅಧಿಕಾರಿಗಳಿಗೆ ಖುದ್ದು ಲಿಖಿತ ಸಮಜಾಯಿಷಿ ಸಲ್ಲಿಸಬೇಕು. ತಪ್ಪಿದ್ದಲ್ಲಿ ಅವರು ನಿವೃತ್ತಿಗೆ ಒಪ್ಪಿದ್ದಾರೆಂದು ಪರಿಗಣಿಸಲಾಗುತ್ತದೆ ಎಂದು ಬಿಎಂಟಿಸಿ ಎಚ್ಚರಿಕೆ ನೀಡಿದೆ. ಈ ಸಂಬಂಧ **1800** ಮಂದಿಗೆ ನೋಟಿಸ್ ಜಾರಿಗೊಳಿಸಲಾಗಿದೆ.